ಕವಿತೆ



## ನಂದಿನಿ ಹೆದ್ದುರ್ಗ

ಕಲೆ: ಜಬೀವುಲ್ಲಾ ಎಂ. ಅಸದ್



# ಕವಿ

ಮೂರು ದಾರಿ ಕೂಡುವಲ್ಲಿ

ಕೂತೆದ್ದು ಬರುವ
ಇವನು ಯಾರು ಯಾರೋ ಬಿಸಾಡಿ
ಹೋದ ಮಾತುಗಳನ್ನು
ನಾಜೂಕಿನಲ್ಲಿ ಹೆಕ್ಕಿ ತರುತ್ತಾನೆ

ಇಳಿಸಂಜೆ ಅವಳೊಂದಿಗಿನ ಮಾತಿಗೆ
ಕಿವಿಯಾಗುವಾಗ
ಹೆಕ್ಕಿ ತಂದ ಒಣಕಲು ಮಾತನ್ನು
ತಣ್ಣೀರಿನಲ್ಲಿ ಮುಳುಗಿಸಿ
ಕಡಾಯಕ್ಕೆ ಹಾಕಿ ಕುದಿಸುತ್ತಾನೆ

ಮೆತ್ತಗೆ ಹೂವಿನಂತೆ ಅರಳಿಕೊಂಡಾದ
ಮೇಲೆ ಕೆಳಗಿಳಿಸಿ
ಬಣ್ಣದ ಮಾತುಗಳನ್ನು ತಣ್ಣನೆಯ ಮಾತುಗಳನ್ನು
ಘಮ್ಮೆನ್ನುವ ಮಾತುಗಳನ್ನು
ಬಾರೀಕು ವಿಂಗಡಿಸಿ
ಹಾರ ಕಟ್ಟುತ್ತಾನೆ

ಉದ್ದನೆಯ ಹಾರಕ್ಕೆ ಸರಿಯಾದ ರೂಪು
ಬಂದು ಕೊರಳ ಬಳಿಗೆ
ಘಮ್ಮೆನ್ನುವುದನ್ನೆ ಜೋಡಿಸಿ
ತುದಿಯ ಗೊಂಡೆಗೆ
ಅವಳು ಮಾತು ಮುಗಿಸಿ ಇಡುವ
ಮುನ್ನ ತೂರಿದ
ಮುತ್ತು ಸಿಕ್ಕಿಸುತ್ತಾನೆ

ಪ್ರತಿ ಕವಿಗೋಷ್ಠಿಯಲ್ಲೂ
ಅವನು ಓದುವ ಕವಿತೆಗೆ
ಬಾರಿ ಚಪ್ಪಾಳೆ,
ರಸಿಕರು ವಿಮರ್ಶಕರು
ಒಟ್ಟಿಗೆ ಹೇಳುತ್ತಾರೆ.
'ಆಹಾ... ಅದೊಂದು ಪದ!'

ಅವಳು ತೂರುವ ಮುತ್ತುಗಳು
ಬೇರೆಲ್ಲೂ ಹೋಗದಂತೆ
ಮೈಯೆಲ್ಲ ಕಣ್ಣಾಗಿ
ಕುಂತ ಕವಿಯನ್ನು
ಇತ್ತೀಚೆಗೆ ಯಾರೂ ಕವಿಗೋಷ್ಠಿಗೆ
ಕರೆದಿಲ್ಲ
ಬಿಸಾಡಿಹೋದ ಮಾತುಗಳ
ಹೆಕ್ಕಿ ತರಲು ಈಗವನಿಗೆ
ಪುರುಸೊತ್ತೂ ಇಲ್ಲ



